# ಹಿರಿಯ ಪ್ರಾಥಮಿಕ ಶಾಲಾ ಹಂತದ ಮಕ್ಕಳ ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಭಾಷಾ ಚಟುವಟಿಕೆಗಳ ಪಾತ್ರ

ಡಾ: ಹಸೀನ್ ತಾಜ್, ಪ್ರೊಫೆಸರ್ ಮತ್ತು ಡೀನ್ ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು . ನಾಗಮ್ಮ ಕೆ.ಟಿ. ಸಹ ಶಿಕ್ಷಕರು ಮತ್ತು ಸಂಶೋಧನಾ ವಿದ್ಯಾರ್ಥಿ, ಸ.ಹಿ.ಪ್ರಾ.ಶಾ, ರಾಮೋಹಳ್ಳಿ, ಬೆಂಗಳೂರು.

## ಪೀಠಿಕೆ

ಮಾನವ ಜನಾಂಗವನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿರುವ ಪ್ರಮುಖ ಸಾಧನವೆಂದರೆ ಭಾಷೆ. ಮಾತನಾಡುವ ಶಕ್ತಿಯಿರುವುದರಿಂದಲೇ ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನವಾಗಿರುವನು. ಭಾಷೆ ಮನುಷ್ಯ ಸಂಪಾದಿಸಿಕೊಂಡಿರುವ ಆಸ್ತಿ ಎಂದೇ ಹೇಳಬಹುದು. ಭಾಷೆ ನಿತ್ಯ ಪರಿವರ್ತನಶೀಲವಾದುದು, ನಿರಂತರ ಚಲನಶೀಲವಾದುದು. ಭಾಷಾ ವಿಜ್ಞಾನಿ - **ನೋಮ್ ಚಾಮಸ್ಕಿ** ಹೇಳಿರುವಂತೆ " ಮನುಷ್ಯನ ವ್ಯಕ್ತಿತ್ವದ ಅಭಿವ್ಯಕ್ತಿಗೆ ಹಾಗೂ ಸ್ವತಂತ್ರ ಆಲೋಚನೆ ಕ್ರಿಯೆ ರೂಪುಗೊಳ್ಳಲು ಭಾಷೆ ಒಂದು ಪರಿಣಾಮಕಾರಿ ಸಾಧನವಾಗಿದೆ."

ಪ್ರಸ್ತುತ ದಿನಗಳಲ್ಲಿ ಭಾಷಾ ಬೋಧನೆ ಎಂಬುದು ಒಂದು ಸವಾಲು ಎಂದು ಹೇಳಬಹುದು. ಅದರಲ್ಲೂ ಪ್ರಾಥಮಿಕ ಶಾಲಾ ಹಂತದ ಮಕ್ಕಳಲ್ಲಿ ಭಾಷಾ ಸಾಮರ್ಥ್ಯಗಳನ್ನು ಬೆಳೆಸುವುದು ಸುಲಭದ ಮಾತಲ್ಲ. ಅದಕ್ಕೆ ಶಿಕ್ಷಕರ ನಿರಂತರ ಪರಿಶ್ರಮವೂ ಕಾಳಜಿಯೂ ಅತ್ಯವಶ್ಯಕ. ಮಗು ಭಾಷೆಯಲ್ಲಿ ಪಾಂಡಿತ್ಯ ಗಳಿಸದ ಹೊರತು ಇತರ ವಿಷಯಗಳನ್ನು ಅರ್ಥೈಸಿಕೊಳ್ಳಲು, ಗ್ರಹಿಸಲು ಸಾಧ್ಯವಿಲ್ಲ. ಅದ್ದರಿಂದ ಪ್ರಾಥಮಿಕ ಶಾಲಾ ಹಂತದಿಂದಲೇ ಮಗುವಿನ ಭಾಷಾ ಕಲಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು. ಮಾಡಿ- ಕಲಿ ನೋಡಿ-ತಿಳಿ ಎಂಬ ತತ್ವದ ಅನ್ವಯ ಮಕ್ಕಳಿಗೆ ಭಾಷೆಯನ್ನು ಮೌಖಿಕವಾಗಿ ಮಾತ್ರ ಬೋಧಿಸದೆ ಚಟುವಟಿಕೆಯುಕ್ತವಾಗಿ ನವೀನ ವಿಧಾನಗಳ ಮೂಲಕ ಮಕ್ಕಳನ್ನೇ ಕಲಿಕಯಲ್ಲಿ ತೊಡಗಿಸಿಕೊಂಡು ಕಲಿಸುವುದರಿಂದ ಮಕ್ಕಳು ಆಸಕ್ತಿಯುತವಾಗಿ ಕಲಿಯುತ್ತಾರೆ.

## ಅಧ್ಯಯನದ ಉದ್ದೇಶ:

ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಭಾಷಾ ಚಟುವಟಿಕೆಗಳ ಪಾತ್ರದ ಬಗ್ಗೆ ತಿಳಿಯುವುದು. ಭಾಷಾ ಬೋಧನೆಯಲ್ಲಿ ಮತ್ತು ಕಲಿಕೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ತಿಳಿಯುವುದು.

**ವಿಧಾನ:** ಪ್ರಸ್ತುತ ಅಧ್ಯಯನಕ್ಕೆ ಬೆಂಗಳೂರು ನಗರ ದಕ್ಷಿಣ ವಲಯ-1 ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮೋಹಳ್ಳಿಯ ಒಂದರಿಂದ ಎಂಟನೆ ತರಗತಿಯ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಶಿಕ್ಷಕರ ತರಗತಿ ನಿರ್ವಹಣೆಯ ನೈಜ ಅನುಭವ, ಶಿಕ್ಷಕರ ಸಂದರ್ಶನ ಮತ್ತು ವಿದ್ಯಾರ್ಥಿಗಳ ಕಲಿಕಾ ಸನ್ನಿವೇಶ, ಮಕ್ಕಳ ಜೊತೆ ಚರ್ಚೆ ಮತ್ತು ಭಾಷಾ ಬೋಧನೆಗೆ ಅಳವಡಿಸಿಕೊಳ್ಳಬಹುದಾದ ಕೆಲವೊಂದು ಚಟುವಟಿಕೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಭಾಷೆ ಒಂದು ಮಾನಸಿಕ ಕ್ರಿಯೆ, ಧ್ವನಿ ಸಂಕೇತಗಳು ಮತ್ತು ಲಿಪಿ ಸಂಕೇತಗಳಿಂದ ವ್ಯವಸ್ಥಿತವಾಗಿ ಅರ್ಥಬದ್ಧವಾಗಿ ರಚನೆಯಾಗಿರುವ ಒಂದು ಕೌಶಲ. ಆಲಿಸುವಿಕೆ, ಮಾತು, ಓದು, ಬರಹ, ಕಾಗುಣಿತ, ವಾಕ್ಯ ರಚನೆ ಇತ್ಯಾದಿ ಕೌಶಲಗಳಲ್ಲಿ ಹಲವು ಉಪ ಕೌಶಲಗಳು ಸಮನ್ವಯವಾಗುತ್ತವೆ. ಭಾಷೆಯ ಕಲಿಕೆ ಒಂದು ಸಹಜ ಕ್ರಿಯೆ.

ಜನಿಸಿದ ಮಗುವು ತಾಯಿಯ ಮಡಿಲಲ್ಲಿ ಸಹಜವಾಗಿ ತನ್ನ ತಾಯಿಯ ಭಾಷೆಯನ್ನು ಅನುಕರಣೆಯಿಂದ ಕಲಿಯುತ್ತದೆ. ಭಾಷಾ ಕಲಿಕೆ ಹಾಗೂ ಪ್ರಯೋಗ ಸಹಜ ಕ್ರಿಯೆ ಹಾಗೂ ಕಲಿಕೆಯಾದರೂ ವ್ಯವಸ್ಥಿತ ಮತ್ತು ಅರ್ಥ ಬದ್ಧ ತರಬೇತಿ ಮತ್ತು ಅಭ್ಯಾಸಗಳಿಲ್ಲದೆ ಭಾಷಾ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಕಲಿಸಲಾಗುವುದಿಲ್ಲ. ಭಾಷೆಯ ಧ್ವನಿ ಸಂಕೇತಗಳು ಹಾಗೂ ರೇಖಾ ವಿನ್ಯಾಸಗಳನ್ನು ಅರ್ಥಬದ್ಧವಾಗಿ ರಚಿಸಿ ಪ್ರಯೋಗಿಸುವುದು ಅಗತ್ಯ. ಶಾಲೆಗಳಲ್ಲಿ ಭಾಷಾ ಕಲಿಕೆ ಮತ್ತು ಬೋಧನೆಯು ಒಂದು ಅಧಿಕೃತ ಕೆಲಸವಾಗಿದೆ. ಭಾಷಾ ಕೌಶಲ್ಯಗಳು ಹಾಗೂ ಸಾಮರ್ಥ್ಯಗಳನ್ನು ಪ್ರಾಥಮಿಕ ಹಂತದಲ್ಲಿ ಕಲಿಸುವಾಗ ವೈಜ್ಞಾನಿಕವಾಗಿ ಯೋಜಿಸಬೇಕು. ಭಾಷೆಯನ್ನು ಯಾರು ಬೇಕಾದರೂ ಹೇಗೆ ಬೇಕಾದರೂ ಕಲಿಸಬಹುದು ಎಂಬುದು ಒಳ್ಳೆಯದಲ್ಲ. ಭಾಷಾ ಕಲಿಕೆಯಲ್ಲಿ ಒಳಗೊಳ್ಳುವ ಮನೋವೈಜ್ಞಾನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಮತ್ತು ಹಿನ್ನಲೆಗಳನ್ನು ಪರಿಗಣಿಸಬೇಕು. ಈ ಉದ್ದೇಶದಿಂದ ಮಕ್ಕಳು ಭಾಷಾ ಕೌಶಲ್ಯಗಳ ರಚನೆ ಹಾಗೂ ಪ್ರಯೋಗ ಸಾಮರ್ಥ್ಯ ಕಲಿಯಬಹುದಾದ ಸಂದರ್ಭಗಳನ್ನು ತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕು. ಈ ಹಿನ್ನಲೆಯಲ್ಲಿ ಶಿಕ್ಷಕ ಭಾಷಾ ಕಲಿಕೆ ಹಾಗೂ ಬೋಧನೆಯಲ್ಲಿ ಅಳವಡಿಸಬಹುದಾದ ನಿಯಮಗಳನ್ನು ತಂತ್ರಗಳನ್ನು ಚಟುವಟಿಕೆಗಳನ್ನು ಆರ್ಥಮಾಡಿಕೊಳ್ಳಬೇಕು.

**ಭಾಷಾ ಬೋಧನೆಯಲ್ಲಿ ಚಟುವಟಿಕೆಗಳ ಪಾತ್ರ :**

"Sound Mind in a Sound Body" - ಎನ್ನುವಂತೆ ಚಟುವಟಿಕೆಗಳು ಮಕ್ಕಳ ಮೈ ಮನಸ್ಸು ವಿಕಾಸವಾಗಲು ನೆರವಾಗುತ್ತದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಚಟುವಟಿಕೆಯಿಂದ ಕಲಿಕಾ ಬೋಧನಾ ಪ್ರಕ್ರಿಯೆ ಸಾಗಬೇಕು. ಮಾಡುತ್ತಾ ಕಲಿ, ಆಡುತ್ತಾ ಕಲಿ, ಪಾಲ್ಗೊಂಡು ಕಲಿ ಎಂಬ ಮನೋವೈಜ್ಞಾನಿಕ ತತ್ವದಂತೆ ಒಂದು ಭಾಷೆಯನ್ನು ಮಗುವಿಗೆ ಕಲಿಸಬೇಕಾದರೆ ಮಗುವೇ ಸ್ವತಃ ತೊಡಗಿಕೊಂಡು ಕಲಿಯುವ ಪ್ರಕ್ರಿಯೆಯಾಗಬೇಕು, ಮಕ್ಕಳು ಸ್ವ ಇಚ್ಚೆಯಿಂದ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅವರಿಗೆ ಕಲಿಕೆ ಹೊರೆ ಎನಿಸದೆ ಸಂತಸದಿಂದ ಕಲಿಯುತ್ತಾರೆ. ಚಟುವಟಿಕೆಗಳು ಶಾರೀರಿಕ ವಿಕಾಸಕ್ಕೆ, ಜ್ಞಾನೇಂದ್ರಿಯಗಳ ಪಟುತ್ವಕ್ಕೆ ಹಾಗೂ ಸ್ವಯಂ ಅಭಿವ್ಯಕ್ತಿಗೆ ಪೂರಕವಾಗುವದರಿಂದ ಮಕ್ಕಳ ಶರೀರ, ಮನಸ್ಸು ಮತ್ತು ಭಾಷೆ ಸಮ ತೂಕವಾಗಿ ಬೆಳೆಯಲು ಸಹಾಯಕವಾಗುತ್ತದೆ.

- ❖ ಮಕ್ಕಳಲ್ಲಿ ಆಸಕ್ತಿಯಿಂದ ಕಲಿಕೆಯುಂಟಾಗುತ್ತದೆ.
- ❖ ಮಕ್ಕಳಲ್ಲಿ ಸೃಜನಶೀಲ ಸಾಮರ್ಥ್ಯ ಹೆಚ್ಚುತ್ತದೆ.
- ❖ ಕಲಿಕೆ ಅರ್ಥಪೂರ್ಣವಾಗುತ್ತದೆ.
- ❖ ಗುಂಪಿನ ಪ್ರವೃತ್ತಿ ,ನಾಯಕತ್ವ ಗುಣ ಬೆಳೆಸುತ್ತದೆ.
- ❖ ಮಕ್ಕಳು ಪರಸ್ಪರ ವಿಚಾರ ವಿನಿಮಯ, ಅಭಿಪ್ರಾಯ ಪ್ರಕಟಿಸುವ, ಸ್ವಯಂ ಶಿಸ್ತು ಮೂಡಿಸುತ್ತದೆ.
- ❖ ಮಕ್ಕಳಲ್ಲಿ ಉತ್ತಮ ಹವ್ಯಾಸ ಬೆಳೆಸುತ್ತದೆ.

ಭಾಷಾ ವಿಷಯಗಳನ್ನು ಬೋಧಿಸುವ ಶಿಕ್ಷಕರು ಭಾಷೆಯ ಬಗೆಗಿನ ವಿವಿಧ ರೀತಿಯ ಆಕರ್ಷಕ ಚಟುವಟಿಕೆಗಳನ್ನು, ಅಭ್ಯಾಸಗಳನ್ನು ನಿಯೋಜಿಸುವುದರಿಂದ, ಭಾಷಾ ಕೌಶಲ್ಯಗಳಲ್ಲಿ ಸಾಮರ್ಥ್ಯ ಬೆಳೆಸಲು ಸಾಧ್ಯ. ಭಾಷಾ ಪಾಠಗಳಲ್ಲಿ ಬರುವ ಅಭಿನಯ, ಸಂಭಾಷಣೆ, ಕಥೆ, ಕವನ, ನಾಟಕ, ಇತ್ಯಾದಿ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕಲಿಸಲು ಸಾಧ್ಯ. ಭಾಷೆಯ ವಿವಿಧ ಕೌಶಲ್ಯಗಳನ್ನು ಭಾಷೆಯನ್ನು ಬಳಸುತ್ತಾ ಕಲಿಸಬೇಕು. ಅಭ್ಯಾಸ ಮಾಡಿಸುತ್ತಾ ಪರಿಣತಿ ಬೆಳಸಬೇಕು. ಬೋಧಿಸುವ ಪಠ್ಯ ವಿಷಯಗಳನ್ನು ಯಾಂತ್ರಿಕವಾಗಿ ಪರಿಚಯಿಸದೇ ವಿವಿಧ ಭಾಷಾ ಚಟುವಟಿಕೆಗಳ ಮೂಲಕ ಪರಿಚಯಿಸಿದರೆ ಭ್ಲಾಷಾ ಪ್ರಯೋಗಕ್ಕೆ ಆದ್ಯತೆ ನೀಡಿದಂತಾಗುತ್ತದೆ. ಗುಂಪಿನ ಆಟಗಳು ಸಾಹಿತ್ಯಿಕ ಆಟ, ಭಾಷಣ, ,ಚರ್ಚೆ, ಹಾಡುಗಾರಿಕೆ, ಸಂಗೀತ ಸ್ಪರ್ಧೆ, ಕಂಠಪಾಠ ಸ್ಪರ್ಧೆ, ಓದುವ ಸ್ಪರ್ಧೆ, ಏಕ ಪಾತ್ರ ಅಭಿನಯ, ಲಿಂಗ, ವಚನ, ವಿಭಕ್ತಿ ಬದಲಾಯಿಸಿ ಬರೆಸುವ ಆಟ ಇತ್ಯಾದಿ ಚಟುವಟಿಕೆಗಳನ್ನು, ತರಗತಿಯ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳುವುದರಿಂದ, ಮಕ್ಕಳ ಭಾಷೆ ಮತ್ತು ಬುದ್ಧಿಯನ್ನು ಬೆಳಸಬಹುದು.

ಭಾಷಾ ಸಾಮರ್ಥ್ಯ ಗಳಿಸಿಕೊಳ್ಳಬೇಕಾದರೆ, ಆಲಿಸುವಿಕೆ, ಮಾತು, ಓದು ಮತ್ತು ಬರವಣಿಗೆಯ ಕೌಶಲ ಬೆಳೆಯಬೇಕು. ಈ ನಾಲ್ಕು ಕೌಶಲಗಳು ಬೆಳೆಯಲು ಮೂಲಭೂತವಾಗಿ ಒಂದು ಭಾಷೆಯಲ್ಲಿನ ಪದ ಸಂಪತ್ತು

ಬೆಳೆಯಬೇಕು. ಪದಗಳು ಒಂದು ಭಾಷೆಯ ಮೂಲ ಸಲಕರಣೆಗಳು, ಪದಗಳಿಲ್ಲದೆ ಒಂದು ಭಾಷೆಗೆ ಅಸ್ತಿತ್ವ . ಇರುವುದಿಲ್ಲ. ಆದುದರಿಂದ ಒಂದು ಭಾಷೆಯನ್ನು ಕಲಿಸುವ ಪ್ರಾಥಮಿಕ ಹಂತದಲ್ಲಿ, ಆ ಭಾಷೆಯ ಪದ ಸಂಪತ್ತನ್ನು ಬೆಳಸಬೇಕಾದುದು ಅವಶ್ಯಕ. ಮಗು ಬೆಳೆದಂತೆ ಪದ ಸಂಪತ್ತು ಹೆಚ್ಚಾಗುತ್ತಾ ಹೋಗುತ್ತದೆ. ಮಗುವಿನ ಸಾಮಾಜಿಕ ಶೈಕ್ಷಣಿಕ ಪರಿಸರಗಳು ಉತ್ತಮವಾಗಿದ್ದರೆ, ಪದ ಸಂಪತ್ತು ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಾ ಹೋಗುತ್ತದೆ. ಮಗುವು ತನ್ನ ದಿನನಿತ್ಯ ವ್ಯವಹಾರ ಹಾಗೂ ಶಾಲೆಯ ವಿವಿಧ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಪದಗಳ ಬಳಕೆ ಮಾಡುತ್ತದೆ. .. ಐದು ವರ್ಷದ ಮಗುವಿನಲ್ಲಿ ಮೂರು ಸಾವಿರ ಪದಗಳು, ಹದಿನಾಲ್ಕು ವರ್ಷದ ವಿದ್ಯಾರ್ಥಿಗಳಲ್ಲಿ ಎಂಟರಿಂದ ಹತ್ತು ಸಾವಿರ ಪದಗಳು ಇರುತ್ತವೆಂದು ಅಂದಾಜು ಮಾಡಲಾಗಿದೆ.

**ಮಕ್ಕಳ ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಅಳವಡಿಸಬಹುದಾದ ಚಟುವಟಿಕೆಗಳು:**

- ಮಗುವಿಗೆ ಸ್ವತಂತ್ರವಾಗಿ ಮಾತನಾಡಲು ಅವಕಾಶ
- ಅಶು ಭಾಷಣ, ಪುಟಾಣಿ ಭಾಷಣ, ಸಂದರ್ಶನ, ಚರ್ಚೆ, ಸಂಭಾಷಣೆ ಏರ್ಪಡಿಸುವುದು. .
- ಓದಿದ ವಿಷಯದ ಬಗ್ಗೆ ಟಿಪ್ಪಣಿ ಬರೆಸುವುದು.
- ಪತ್ರ ಲೇಖನ ಮತ್ತು ದಿನಚರಿ ಬರೆಸುವುದು, ಕಥೆ ಬರೆಸುವುದು, ಒಂದು ಸನ್ನಿವೇಶ ಘಟನೆ ವಿವರಿಸುವುದು.
- ಏಕ ಪಾತ್ರ ಅಭಿನಯ ಮತ್ತು ಪ್ರಶ್ನೋತ್ತರ ಕಾರ್ಯಕ್ರಮ ಆಯೋಜನೆ,
- ಪಾರಿಭಾಷಿಕ ನಿಘಂಟನ್ನು ಓದಿಸುವುದು, ವಾಕ್ಯರಚನೆ, ಅಭ್ಯಾಸ ಪದಗಳ ಭಾವಾರ್ಥ ಬರೆಸುವುದು.
- ಅಂತ್ಯಾಕ್ಷರಿ ಪದ ರಚನೆ, ಉದಾಃ ನದಿ, ದಿನಕರ, ರಥೋತ್ಸವ, ವರದಿ, ದಿಗ್ವಿಜಯ ಇತ್ಯಾದಿ.
- ಪೂರಕ ಪದ ಹೇಳಿಸುವುದು ಮತ್ತು ಬರೆಸುವುದು. ಉದಾಃ ಹಸುಳೆ, ಮಗು, ಕಂದ. ಪಾಪು
- ಕೆಲವು ವಸ್ತುಗಳನ್ನು ಹೇಳಿ ಅವುಗಳ ಗುಣಗಳನ್ನು ಹೇಳಿಸುವುದು. ಸಕ್ಕರೆ- ಸಿಹಿ, ಬೇವು -ಕಹಿ ಕುದುರೆ ವೇಗ ಇತ್ಯಾದಿ,
- ಕೆಲವು ಪದಗಳನ್ನು ಹಾಗೂ ಪರಿಕಲ್ಪನೆಗಳನ್ನು ಕೊಟ್ಟು ಅವುಗಳಿಗೆ ಹತ್ತಿರ ಅಥವಾ ನೇರ ಸಂಬಂಧವಿರುವ ಪದ ಪಟ್ಟಿ ಮಾಡಿಸುವುದು, ಉದಾಃ ಹಾಲು, ಮೊಸರು, ಬೆಣ್ಣೆ, ತುಪ್ಪ, ಶಾಲೆ ,ಶಿಕ್ಷಕ, ವಿದ್ಯಾರ್ಥಿ, ಗ್ರಂಥಾಲಯ, ಪುಸ್ತಕ
- ಪದ ಬಂಧಗಳನ್ನು ರಚಿಸುವ ಮತ್ತು ಬಿಡಿಸುವ ಕಾರ್ಯಕ್ರಮಗಳು
- ನಿಯತಕಾಲಿಕೆ ಪತ್ರಿಕೆಗಳಲ್ಲಿ ಬರುವ ಪದ ಬಂಧಗಳನ್ನು ಮಕ್ಕಳಿಂದ ಬಿಡಿಸುವುದು.
- ಒಗಟು ಬಿಡಿಸುವುದು, ಚಿತ್ರನೋಡಿ ಕಥೆ ಕಟ್ಟುವುದು.
- ವಿಶಿಷ್ಟ ಪದ ರಚನೆ ಆಟ ಉದಾಃ ನಯನ, ಕನಕ, ವಿಕಟಕವಿ, ಇತ್ಯಾದಿ..
- ಅದಲು ಬದಲಾಗಿರುವ ಪದ ಜೋಡಿಸಿ ವಾಕ್ಯ ರಚನೆ ಮಾಡಿಸುವುದು.ಕಥೆ ಪೂರ್ಣಗೊಳಿಸುವುದು.
- ಏಕ ಪಾತ್ರ ಆಭಿನಯ ಮತ್ತು ಪ್ರಶ್ನೋತ್ತರ ಕಾರ್ಯಕ್ರಮ ಆಯೋಜನೆ
- ಪಠ್ಯ ಪುಸ್ತಕ ದಲ್ಲಿರುವ ಹೊಸ ಪದ ಪಟ್ಟಿ ಮಾಡಿ ಅದಕ್ಕೆ ಅರ್ಥ ತಿಳಿಸುವುದು ಮತ್ತು ವಾಕ್ಯ ರಚಿಸುವುದು,

❖ ಚಿತ್ರಪಟ ಮತ್ತು ಮಾದರಿ ಪ್ರದರ್ಶಿಸುವುದು, ಮಕ್ಕಳಿಂದ ಹೆಸರು ಹೇಳಿಸುವುದು.

**ಇವುಗಳ ಜೊತೆಗೆ ಕೆಲವೊಂದು ನಾವೀನ್ಯಯುತವಾದ ಚಟುವಟಿಕೆಗಳನ್ನು ಭಾಷಾ ಬೋಧನೆಯಲ್ಲಿ ಆಳವಡಿಸಿಕೊಳ್ಳಬಹುದು.**

- ❖ ಪಾತ್ರ ನಿರ್ವಹಣೆ - ಮನರಂಜನೆಯ ಜೊತೆಗೆ ಕಲಿಕೆಯಾಗುತ್ತದೆ. ಮಕ್ಕಳು ಆಸಕ್ತಿದಾಯಕವಾಗಿ ಕಲಿಯುತ್ತಾರೆ. ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಸರಿ ಹೊಂದುತ್ತದೆ. ಮಕ್ಕಳಲ್ಲಿ ಐತಿಹಾಸಿಕ ಮೌಲ್ಯ ಬೆಳಸಲು, ನಟನ ಸಾಮರ್ಥ್ಯ ಭಾಷಾ ಸಾಮರ್ಥ್ಯ ಪತ್ತೆ ಹಚ್ಚಲು ವಿಮರ್ಶಾತ್ಮಕ ಚಿಂತನೆ, ಸೃಜನ ಶೀಲತೆ ಬೆಳೆಸಲು ಸಹಕಾರಿ. ಉದಾ: ಮಹಾತ್ಮ ಗಾಂಧಿ, ಬಸವಣ್ಣ , ನೆಹರೂ ರವರ ಪಾತ್ರ ನಿರ್ವಹಣೆ.
- ❖ ದೃಕ್ ಶ್ರವಣ ಉಪಕರಣಗಳ ಬಳಕೆ - ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತನಾಡುವಿಕೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನೋಡುವುದರ ಮೂಲಕ , ಕೇಳುವುದರ ಮೂಲಕ ಕಲಿಕೆ ಉಂಟಾಗುತ್ತದೆ.
- ❖ ಸಹಪಾಠಿ ಕಲಿಕೆ- ತುಂಬಾ ಪರಿಣಾಮಕಾರಿಯಾದುದು, ಕಲಿಕೆಯಲ್ಲಿ ಮುಂದುವರೆದಿರುವ ವಿದ್ಯಾರ್ಥಿ ಜೊತೆಗೆ ಹಿಂದುಳಿದ ವಿದ್ಯಾರ್ಥಿಯನ್ನು ಕಲಿಕೆಯಲ್ಲಿ ತೊಡಗಿಸಿ ಕಲಿಸುವುದು. ವಿದ್ಯಾರ್ಥಿಗಳ ಜ್ಞಾನ ವರ್ಗಾವಣೆಯಾಗುತ್ತದೆ. ಚೆನ್ನಾಗಿ ಓದುವ ವಿದ್ಯಾರ್ಥಿ ಇನ್ನೂ ಚೆನ್ನಾಗಿ ಕಲಿಯುತ್ತಾನೆ. ಆರೋಗ್ಯಕರ ಸ್ಪರ್ಧೆ ಬೆಳೆಯುತ್ತದೆ. ಶಿಸ್ತು, ಸಂವಹನ, ಕೌಶಲ್ಯ ಬೆಳೆಯುತ್ತದೆ.
- ❖ ಸಹಭಾಗಿತ್ವ ಕಲಿಕೆ- ವಿದ್ಯಾರ್ಥಿಗಳು ಗುಂಪಿನಲ್ಲಿ ಕಲಿಯುವುದು. ಸೃಜನ ಶೀಲತೆ, ಯೋಜನೆ, ಸಂಘಟನೆ, ಕೌಶಲ್ಯ ಹೆಚ್ಚಾಗುತ್ತದೆ. ಶಿಕ್ಷಕ ಮೇಲ್ವಿಚಾರಕನಾಗಿ ಕಾರ್ಯಯೋಜಿಸಿ ಯೋಜನೆಯನ್ನು ವೀಕ್ಷಿಸಿ, ಸಲಹೆಯನ್ನು ನೀಡುವುದು. ಪಠ್ಯಕ್ರಮಕ್ಕೆ ಅನುಗುಣವಾಗಿ, ಗುಂಪು ಚಟುವಟಿಕೆಗಳನ್ನು ನೀಡುವುದು. ತರಗತಿಯಲ್ಲಿ ಪ್ರಸ್ತುತ ಪಡಿಸಲು ಅವಕಾಶ.

**ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಎದುರಾಗುವ ಸಮಸ್ಯೆಗಳು:**

ಪ್ರಾಥಮಿಕ ಶಾಲಾ ಹಂತದ ಮಕ್ಕಳ ಆಲಿಸುವಿಕೆ, ಮಾತು, ಓದು, ಬರಹಗಳಲ್ಲಿ ಹಲವಾರು ದೋಷಗಳು ಕಂಡುಬರುತ್ತವೆ. ಈ ಹಂತದಲ್ಲಿ ಮಕ್ಕಳ ದೋಷಗಳನ್ನು ಗಮನಿಸಿ ಸೂಕ್ತ ಅಭ್ಯಾಸಗಳ ಮೂಲಕ ಪರಿಹರಿಸದೇ ಹೋದರೆ ದೋಷಗಳು ಹಾಗೇ ಮುಂದುವರಿದು, ಮಕ್ಕಳ ಭಾಷಾ ಸಾಮರ್ಥ್ಯ ಸಮರ್ಪಕವಾಗಿ ಬೆಳೆಯಲಾರದು. ಆದ್ದರಿಂದ ಶಿಕ್ಷಕರು ಪ್ರಾಥಮಿಕ ಹಂತದಲ್ಲೇ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಬೇಕು.

ಆಲಿಸುವಿಕೆಯಲ್ಲಿನ ದೋಷಗಳು: ಮಾನಸಿಕ ಏಕಾಗ್ರತೆಯಿಲ್ಲದೆ ಆಲಿಸುವುದು, ಅರ್ಥಮಾಡಿಕೊಳ್ಳದೇ ಆಲಿಸುವುದು, ಆಲಿಸಿ ಸ್ಮರಣೆಯಲ್ಲಿ ಉಳಿಸಿಕೊಳ್ಳದಿರುವುದು, ಅಪೂರ್ಣ ಆಲಿಸುವಿಕೆ.

ಮಾತುಗಾರಿಕೆ ದೋಷಗಳು: ಉಚ್ಚಾರದ ದೋಷಗಳು, ಉಗ್ಗುವಿಕೆ, ಅಪೂರ್ಣ ವಾಕ್ಯ ರಚನೆ ದೋಷಗಳು, ಧ್ವನಿ ಏರಿಳಿತ ಇಲ್ಲದೇ ಮಾತನಾಡುವುದು, ಸಂಭಾಷಣೆ ದೋಷ, ವ್ಯಾಕರಣ ದೋಷಗಳು.

ಓದುಗಾರಿಕೆಯಲ್ಲಿ ದೋಷಗಳು: ಅಸ್ಪಷ್ಟವಾಗಿ ಓದುವುದು, ನಿಧಾನವಾಗಿ ಓದುವುದು, ಉಚ್ಚಾರಣೆಯ ದೋಷಗಳು, ವ್ಯಾಕರಣಾಂಶ ಮತ್ತು ಲೇಖನ ಚಿಹ್ನೆ ಆಳವಡಿಸದೆ ಓದುವುದು.

ಕೈ ಬರಹದ ದೋಷಗಳು: ಅಂದವಾಗಿ ಸ್ವಷ್ಟವಾಗಿ ಬರೆಯದೆ, ವಕ್ರವಾಗಿ ಬರೆಯುವುದು, ಅಕ್ಷರಗಳನ್ನು ಪದಗಳನ್ನು ಸುಸಂಬದ್ಧವಾಗಿ ಜೋಡಿಸದೇ ಬರೆಯುವುದು, ಕಾಗುಣಿತ ದೋಷಗಳು, ವಾಕ್ಯ ಮತ್ತು ವಾಕ್ಯ ವೃಂದ ರಚನೆಯ ದೋಷಗಳು, ಲೇಖನ ಚಿಹ್ನೆಗಳನ್ನು ಅಳವಡಿಸುವಾಗ ಆಗುವ ದೋಷಗಳು,

ಇವುಗಳ ಜೊತೆಗೆ ಕೆಲವು ಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿಗಳಲ್ಲಿ ಗಮನಿಸಬಹುದಾದ ಸಮಸ್ಯೆಗಳೆಂದರೆ,

ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ, ಉತ್ಸಾಹ, ಸಿದ್ಧತೆಯಿಲ್ಲದಿರುವುದು, ವೈಯ್ಯಕ್ತಿಕವಾದ ಧೋರಣೆಗಳು, ಅಹಂ ಕೇಂದ್ರಿತ ಭಾವನೆ, ಆರೋಗ್ಯದ ಸಮಸ್ಯೆಗಳು, ಪರಿಸರದ ಅಡಚಣೆಗಳು, ಅರ್ಥ ಗ್ರಹಿಕೆಯಲ್ಲಿನ ತೊಂದರೆಗಳು, ಭಾಷೆ ಪದ ವಾಕ್ಯ ರಚನೆ ಪ್ರಯೋಗದಲ್ಲಿನ ಸಮಸ್ಯೆ, ವಿದ್ಯಾರ್ಥಿ ಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನಲೆ.

**ಮಕ್ಕಳ ದೋಷ ಪರಿಹಾರ ಕ್ರಮಗಳು:**

ಮಕ್ಕಳ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಆಸಕ್ತಿ ಕೆರಳಿಸಿ ಬೋಧನೆ

ಚಿತ್ರಪಟ, ಚಾರ್ಟುಗಳ ಬಳಕೆ, ಶಿಕ್ಷಕನ ಭಾಷಾ ಶೈಲಿ ಮತ್ತು ಉಚ್ಚಾರ ಕ್ರಮ ಉತ್ತಮವಾಗಿರಬೇಕು

ನವೀನ ಬೋಧನಾ ವಿಧಾನಗಳ ಬಳಕೆ

ಭಾಷಾ ಕೌಶಲ್ಯಗಳ ಕಲಿಕೆಯಲ್ಲಿ ಕಂಡುಬರುವ ದೋಷಗಳನ್ನು ಪತ್ತೆ ಹಚ್ಚಿ ಕ್ರಿಯಾ ಸಂಶೋಧನೆ ಮೂಲಕ ಪರಿಹಾರ ಕಂಡುಕೊಳ್ಳುವುದು

ಮಕ್ಕಳ ಆರೋಗ್ಯದ ಬಗ್ಗೆ ವೈಯಕ್ತಿಕ ಗಮನ ಹರಿಸುವುದು

**ಹಿರಿಯ ಪ್ರಾಥಮಿಕ ಶಾಲಾ ಹಂತದ ಮಕ್ಕಳ ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಆಳವಡಿಸಿಕೊಳ್ಳಬಹುದಾದ ಚಟುವಟಿಕೆಗಳನ್ನು ಅಭ್ಯಾಸದ ದೃಷ್ಟಿಯಿಂದ ಈ ಕೆಳಕಂಡಂತೆ ವಿಭಾಗಿಸಬಹುದು.**

**1 ಪಠ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳು :**

ಪದ್ಯವನ್ನು ರಾಗವಾಗಿ ಗಾಯನ ಮಾಡಿಸುವುದು.

ಪಠ್ಯ ಪುಸ್ತಕವನ್ನು ಓದಿಸುವುದು ಮತ್ತು ಸಾರಾಂಶ ಬರೆಸುವುದು

ಪಠ್ಯ ಪುಸ್ತಕದಲ್ಲಿರುವ ಕಥೆ ಕವನ ಬರೆಸುವುದು ಮತ್ತು ಓದಿಸುವುದು

ಪಠ್ಯಕ್ಕೆ ಪೂರಕವಾದ ಪ್ರಶ್ನೋತ್ತರ ಚಟುವಟಿಕೆ

ಉಕ್ತ ಲೇಖನ ನೀಡುವುದು

ಪದ್ಯದ ಭಾವಾರ್ಥ ಬರೆಯುವುದು

ಗಾದೆ, ನುಡಿಮುತ್ತು ವಿಸ್ತರಿಸಿ ಬರೆಯುವುದು

ಪಠ್ಯ ಪುಸ್ತಕದಲ್ಲಿ ಹೊಸ ಪದಗಳಿಗೆ ಅರ್ಥ ಹುಡುಕುವ ಅಭ್ಯಾಸ

ಪಠ್ಯ ಭಾಗವನ್ನು ಗಟ್ಟಿಯಾಗಿ ವಾಚನ ಮಾಡುವ ಸ್ಪರ್ಧೆ

ಅಭ್ಯಾಸ ಪುಸ್ತಕ ಬರೆಸುವುದು

ಪಠ್ಯ ಭಾಗದಲ್ಲಿರುವ ವ್ಯಾಕರಣಾಂಶಗಳನ್ನು- ಸಮಾನಾರ್ಥ ಪದ, ವಿರುದ್ಧ ಅರ್ಥದ ಪದ, ಸಂಧಿ ಪದ, ಸಮಾಸ, ಅಲಂಕಾರ, ಛಂದಸ್ಸು ಪರಿಚಯಿಸುವುದು

ಪಠ್ಯ ವಿಷಯಗಳಲ್ಲಿರುವ ನಾಟಕ ಅಭಿನಯಿಸುವುದು

**2 ಪಠ್ಯೇತರ ವಿಷಯಕ್ಕೆ ಸಂಭಂದಿಸಿದಂತೆ ಚಟುವಟಿಕೆಗಳು:**

ದಿನಚರಿ ಬರೆಸುವುದು

ಪ್ರತಿದಿನ ಮನೆಯಲ್ಲಿ, ಗ್ರಂಥಾಲಯದಲ್ಲಿ ಓದುವ ಅವಕಾಶ ದೊರಕಿಸುವುದು

ನಿಯತಕಾಲಿಕೆ ಹಾಗೂ ದಿನಪತ್ರಿಕೆ ಓದಿಸುವುದು

ಲೇಖನಗಳನ್ನು ಸಂಗ್ರಹಿಸುವುದು ,ಬರೆಯುವುದು

ಸಚಿತ್ರ ಪುಸ್ತಕಗಳನ್ನು , ಕಥೆ ಪುಸ್ತಕಗಳನ್ನು ಓದಿಸುವುದು

ಶಬ್ದಕೋಶದಿಂದ ಹೊಸ ಪದಗಳಿಗೆ ಅರ್ಥ ಹುಡುಕಿಸುವುದು

ನಿರ್ದಿಷ್ಟ ಸಂಖ್ಯೆಯ ಪದಗಳನ್ನು ಕೊಟ್ಟು ಕಥೆ ಕವನ ರಚಿಸುವ ಅಭ್ಯಾಸ

ಪದ ಬಂಧ ರಚಿಸುವ ಮತ್ತು ಬಿಡಿಸುವ ಅಭ್ಯಾಸ

ಆಶು-ಭಾಷಣ ಸ್ಪರ್ಧೆ ಏರ್ಪಡಿಸುವುದು

ಪಾತ್ರಗಳಿಗೆ ಕಥೆ ರಚಿಸಿ ಹೇಳುವ ಅಭ್ಯಾಸ

ಚರ್ಚಾ ಸ್ಪರ್ಧೆ ಪ್ರಬಂಧ ರಚನೆ ಏರ್ಪಡಿಸುವುದು

ಕರ ಪತ್ರ ಗೋಡೆ ಪತ್ರ ಬಿತ್ತಿ ಪತ್ರ ಓದಿಸುವ ಚಟುವಟಿಕೆಗಳು

ಕವಿಗಳ ಜಯಂತಿ- ನಾಡ ಹಬ್ಬ ಆಚರಣೆ- ಪುಸ್ತಕ ಪ್ರದರ್ಶನ

ಈ ಮೇಲಿನಂತೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಭಾಷಾ ಪ್ರೌಢಿಮೆಗಾಗಿ ಆಯೋಜಿಸಬಹುದು.

**ತರಗತಿವಾರು ಚಟುವಟಿಕೆಗಳು:**

ಮೇಲಿನ ಚಟುವಟಿಕೆಗಳನ್ನು ಪ್ರಾಥಮಿಕ ಒಂದರಿಂದ ಐದನೇ ತರಗತಿ , ಆರರಿಂದ ಎಂಟನೇ ತರಗತಿ ಪ್ರೌಢಶಾಲಾ ಹಂತ ಹೀಗೆ ಮೂರು ಹಂತಗಳಲ್ಲಿ ಆಯೋಜಿಸಬಹುದು.

**೧. ಪ್ರಾಥಮಿಕ – ಒಂದರಿಂದ ಐದನೇ ತರಗತಿವರೆಗೆ:**

ಚಿತ್ರನೋಡಿ ಕಥೆ ಹೇಳುವುದು,

ಚಿತ್ರನೋಡಿ ಬರೆಯುವುದು

ಸರಳ ಉಕ್ತ ಲೇಖನ

ಸಚಿತ್ರ ಪುಸ್ತಕ ನೀಡಿ ಓದುವ ಬರೆಯುವ ಚಟುವಟಿಕೆ

ಕಥೆ ಪೂರ್ಣಗೊಳಿಸುವುದು

ಚಿತ್ರನೋಡಿ ಪದ ರಚನೆ ಮಾಡುವುದು

ಚಿತ್ರ ಮತ್ತು ಪದ ಜೋಡಣೆ

ವಾಕ್ಯ ಸರಿಪಡಿಸುವುದು,  ಗಾದೆ ಪೂರ್ಣಗೊಳಿಸುವುದು, ಲಿಂಗ, ವಚನ, ವಿಭಕ್ತಿ, ಪ್ರತ್ಯಯ , ವಿರುದ್ದಾರ್ಥಕ ಪದ ಗುರುತಿಸುವುದು  ಇತ್ಯಾದಿ ಚಟುವಟಿಕೆಗಳನ್ನು ಕೈಗೊಳ್ಳಬಹುದು

**೨. ಹಿರಿಯ ಪ್ರಾಥಮಿಕ ಹಂತ:**

ನಾಟಕ ಏರ್ಪಡಿಸುವುದು, ಗಾದೆ, ಒಗಟು ಬಿಡಿಸುವುದು, ಪಾತ್ರ ಅಭಿನಯ, ಪದಬಂಧ ಬಿಡಿಸುವುದು, ಪಠ್ಯದಲ್ಲಿ ಬರುವ ಸಂಧಿ, ಸಮಾಸ, ವಿಭಕ್ತಿ ಪ್ರತ್ಯಯಗಳಿಗೆ ಸಂಬಂಧಿಸಿದ ಚಟುವಟಿಕೆ

ಸನ್ನಿವೇಶ ಕೊಟ್ಟು ಕಥೆ ರಚಿಸುವುದು, ಚಿತ್ರ ಕಥೆ ರಚನೆ, ಉಕ್ತ ಲೇಖನ ನೀಡುವುದು

**೩, ಪ್ರೌಢಶಾಲಾ ಹಂತ:**

ಸಂಭಾಷಣೆ ಮತ್ತು ಸಂದರ್ಶನ ಏರ್ಪಡಿಸುವುದು

ಗಾದೆ, ಒಗಟು ವಿಸ್ತರಣೆ, ಪದಬಂಧ ರಚಿಸುವುದು, ಕಥೆ ರಚಿಸುವುದು, ಪ್ರಹಸನ, ಭಾಷಾ ಆಟಗಳು, ಪತ್ರ ಲೇಖನ

**ಭಾಷಾ ಕೌಶಲ್ಯಗಳಿಗೆ ಅನುಗುಣವಾಗಿ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳು**

**ಆಲಿಸುವಿಕೆ:**

ಕಥೆ, ಭಾಷಣ , ಸಂಭಾಷಣೆ, ರೇಡಿಯೋ ಪಾಠ, ದೂರದರ್ಶನದ ಕಾರ್ಯಕ್ರಮಗಳು

ಪದ್ಯ-ಗದ್ಯ, ಸಂಗೀತ ಗಾಯನ , ಉಪನ್ಯಾಸ ಆಲಿಸುವುದು

ವಿಷಯವನ್ನು ಆಲಿಸುತ್ತಾ ಅರ್ಥ ಮಾಡಿಕೊಳ್ಳುವುದು

ಆಲಿಸಿದ ನಂತರ ಪ್ರಶ್ನೋತ್ತರ ಕಾರ್ಯಕ್ರಮ, ವಾಚನ ,ವರದಿಗಳನ್ನು ಕೇಳಿ ಅರ್ಥ ಬರೆಸುವುದು

ಕನ್ನಡದ ಉತ್ತಮ ಧ್ವನಿ ಸುರಳಿಗಳ ಸಂಗ್ರಹ ಮತ್ತು ಗಾಯನ ಆಲಿಸುವುದು

**ಮಾತುಗಾರಿಕೆ:**

ಪುಟ್ಟ ಭಾಷಣ, ಆಶು ಭಾಷಣ ಏರ್ಪಡಿಸುವುದು, ಕಥೆ ಹೇಳುವುದು ,ಕಥೆಕಟ್ಟುವುದು,ಚಿತ್ರನೋಡಿ ಕಥೆ ಹೇಳುವುದು.ಕಥೆ ಪೂರ್ಣಗೊಳಿಸುವುದು, ಪರಿಕಲ್ಪನೆಯನ್ನು ವಿವರಿಸಿ ಹೇಳುವುದು, ಸಂಭಾಷಣೆ ಏರ್ಪಡಿಸುವುದು

ಪಾತ್ರ ಅಭಿನಯ ಗಟ್ಟಿ ವಾಚನ ಸ್ವರ್ಧೆ, ನಾಟಕ ಅಭಿನಯ ಸ್ವರ್ಧೆ, ಏಕಪಾತ್ರ ಅಭಿನಯ ಇತ್ಯಾದಿ

**ಓದುಗಾರಿಕೆ:**

ಚಿತ್ರಪಟ ನೋಡಿ ಓದುವ ಅಭ್ಯಾಸಗಳು, ಸಚಿತ್ರ ಕಥೆ ಪುಸ್ತಕ ಓದಿಸುವುದು, ನುಡಿಗಟ್ಟು, ಗಾದೆ, ಒಗಟುಗಳನ್ನು ಓದಿಸುವುದು, ದಿನ ಪತ್ರಿಕೆ, ನಿಯತಕಾಲಿಕಗಳನ್ನು ಓದಿಸುವುದು, ಉತ್ತಮ ಪುಸ್ತಕಗಳನ್ನು ಓದುವ ಅಭ್ಯಾಸ, ಆತ್ಮ ಕಥೆ, ಜೀವನ ಚರಿತ್ರೆಗಳನ್ನು ಓದಿಸುವುದು, ಪ್ರಶ್ನೋತ್ತರಗಳನ್ನು ಓದಿಸುವುದು. ಶಾಲೆ, ಮನೆ ಮತ್ತು ಗ್ರಂಥಾಲಯದಲ್ಲಿ ಓದಿಸುವುದು. ಆಯ್ದ ಪ್ರಬಂಧ, ಕಥೆ, ಕವನ, ಲೇಖನಗಳನ್ನು ಓದಿಸುವುದು.

**ಬರವಣಿಗೆ:**

ರೇಖಾ ವಿನ್ಯಾಸ ಬರೆಯುವ ಅಭ್ಯಾಸ, ಅಕ್ಷರ ಪದಗಳ ಸುಸಂಬಂಧ ಜೋಡಣೆ ಅಭ್ಯಾಸ

ಚಿತ್ರಪಟ ನೋಡಿ ವಾಕ್ಯ ರಚಿಸುವ ಅಭ್ಯಾಸ, ಕಥೆ, ಕವನ, ಪ್ರಬಂಧ ಬರೆಯುವುದು, ಟಿಪ್ಪಣಿ ಬರೆಸುವುದು, ಉಕ್ತಲೇಖನ, ಪ್ರಶ್ನೋತ್ತರ ಬರವಣಿಗೆ, ಪದ್ಯಗಳಿಗೆ ಭಾವಾರ್ಥ, ಸಾರಾಂಶ ಬರೆಯುವ ಅಭ್ಯಾಸ, ದಿನಚರಿ ಮತ್ತು ಪತ್ರ ಬರೆಯುವುದು, ನುಡಿಮುತ್ತು ವಿಸ್ತರಿಸಿ ಬರೆಯುವುದು.

## ಉಪಸಂಹಾರ:

ತರಗತಿಯಲ್ಲಿ ಶಿಕ್ಷಕರಾದವರು ಹಲವಾರು ನಾವೀನ್ಯಯುತ ಸೃಜನಾತ್ಮಕ ಚಟುವಟಿಕೆಗಳನ್ನು ಪಾಠಕ್ಕೆ ಪೂರಕವಾಗಿ ಆಳವಡಿಸಿಕೊಂಡು, ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡರೆ ಕಲಿಕೆ ಶಾಶ್ವತವಾಗಿರುತ್ತದೆ. ಮಕ್ಕಳು ಸಹ ಭಾಷೆಯನ್ನು ಸಹಜವಾಗಿ ಕಲಿಯುತ್ತಾರೆ. ಭಾಷಾ ಪ್ರೌಢಿಮೆಯಿಂದ ಬೇರೆಲ್ಲಾ ಶಾಲಾ ವಿಷಯಗಳನ್ನು ಗ್ರಹಿಸಲು ಸಮರ್ಥರಾಗುತ್ತಾರೆ. ಭಾಷೆಯನ್ನು ಅತಿಯಾದ ಕಟ್ಟುನಿಟ್ಟಿನ ಮೂಲಕ ಕಲಿಸದೆ ವಿವಿಧ ಚಟುವಟಿಕೆಗಳ ಮೂಲಕ ಕಲಿಸಬೇಕು. ಭಾಷೆಯನ್ನು ಬಳಸುತ್ತಾ ಕಲಿಸಿದರೆ ಕಲಿಕೆ ಉತ್ತಮವಾಗುತ್ತದೆ. ಭಾಷಾ ಶಿಕ್ಷಕರು ಬೋಧನೆ ಮತ್ತು ಕಲಿಕೆಗೆ ಶಿಶುಕೇಂದ್ರಿತ ಮತ್ತು ಚಟುವಟಿಕೆ ಪ್ರಧಾನ ವಿಧಾನಗಳನ್ನು ಆಳವಡಿಸಿಕೊಳ್ಳಬೇಕು. ಔಪಚಾರಿಕ ಅಭ್ಯಾಸಗಳು ಮತ್ತು ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಭಾಷೆ,ಸಾಹಿತ್ಯ, ಸಂಸ್ಕೃತಿಯ ಮೌಲ್ಯಗಳನ್ನು, ಕೌಶಲ್ಯಗಳನ್ನು, ವಿದ್ಯಾರ್ಥಿಗಳಲ್ಲಿ ಬೆಳಸಬೇಕು. ಬದಲಾಗುತ್ತಿರುವ ಸಮಾಜಕ್ಕೆ ಅನುಗುಣವಾಗಿ ಭಾಷಿಕ ಕೌಶಲ್ಯಗಳನ್ನು, ಸಂವಹನ ಕೌಶಲ್ಯಗಳನ್ನು ಜ್ಞಾನವನ್ನು, ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

### ಆಧಾರ ಗ್ರಂಥಗಳು:


1. ಅನುಸೂಯ ವಿ. ಪರಗಿ, (2014) - ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ- ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ
2. ಚೈತ್ಯನ್ಯ-2. ಶಿಕ್ಷಕರ ಸಾಹಿತ್ಯ -ಕನ್ನಡ (5, 6 ಮತ್ತು 7ನೇ ತರಗತಿಗಳಿಗೆ) ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು